CAREERINDIA

**SL. No. : J**

ಒಟ್ಟು ಪ್ರಶ್ನೆಗಳ ಸಂಖ್ಯೆ : 57 ]
Total No. of Questions : 57 ]

**CCE PF**
**CCE PR**

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8
[ Total No. of Printed Pages : 8

**ಸಂಕೇತ ಸಂಖ್ಯೆ : 85-K** **Code No. : 85-K**

# ವಿಷಯ : ಸಮಾಜ ವಿಜ್ಞಾನ

## Subject : SOCIAL SCIENCE

**(ಕನ್ನಡ ಭಾಷಾಂತರ / Kannada Version)**

**(ಹೊಸ ಪಠ್ಯಕ್ರಮ / New Syllabus)**

**(ಖಾಸಗಿ ಅಭ್ಯರ್ಥಿ & ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Fresh & Private Repeater)**

ದಿನಾಂಕ : 06. 04. 2018 ] [ Date : 06. 04. 2018

ಸಮಯ : ಬೆಳಿಗ್ಗೆ 9-30 ರಿಂದ ಮಧ್ಯಾಹ್ನ 12-45 ರವರೆಗೆ ] [ Time : 9-30 A.M. to 12-45 P.M.

ಗರಿಷ್ಠ ಅಂಕಗಳು : 100 ] [ Max. Marks : 100

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 57 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ಕೊಡಲಾಗಿದೆ.

ಇಲ್ಲಿಂದ ಕತ್ತರಿಸಿ

**TEAR HERE TO OPEN THE QUESTION PAPER**
**ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ**

**Tear here**

www.careerindia.com

CAREERINDIA



I. **ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ :** $10 \times 1 = 10$

1. ವ್ಯಾಪಾರಸ್ಥರಿಗೆ ಹೆಚ್ಚು ಸೂಕ್ತವಾದ ಬ್ಯಾಂಕ್ ಖಾತೆ

   (A) ಉಳಿತಾಯ ಖಾತೆ (B) ಚಾಲ್ತಿ ಖಾತೆ

   (C) ಆವರ್ತ ಠೇವಣಿ ಖಾತೆ (D) ನಿಶ್ಚಿತ ಠೇವಣಿ ಖಾತೆ

2. 'ವರದಕ್ಷಿಣೆ ನಿಷೇಧ ಕಾಯ್ದೆ' ಜಾರಿಗೆ ಬಂದ ವರ್ಷ

   (A) 1961 (B) 1987

   (C) 1988 (D) 1989

3. ಈ ಕೆಳಗಿನವುಗಳಲ್ಲಿ ಪ್ರತ್ಯಕ್ಷ ತೆರಿಗೆ

   (A) ಕೇಂದ್ರ ಅಬಕಾರಿ ತೆರಿಗೆ (B) ವೈಯಕ್ತಿಕ ವರಮಾನ ತೆರಿಗೆ

   (C) ಸೇವಾ ತೆರಿಗೆ (D) ವಿದೇಶೀ ಪ್ರವಾಸಿಗರ ಮೇಲಿನ ತೆರಿಗೆ

4. **A ಪಟ್ಟಿ**ಯಲ್ಲಿ ಉದ್ಯಮಿಗಳು ಮತ್ತು **B ಪಟ್ಟಿ**ಯಲ್ಲಿ ಅವರಿಂದ ಸ್ಥಾಪಿತವಾದ ಉದ್ಯಮಗಳನ್ನು ನೀಡಲಾಗಿದೆ. ಅವುಗಳಿಗೆ ಸರಿಹೊಂದುವ ಉತ್ತರದ ಗುಂಪನ್ನು ಗುರುತಿಸಿ :

| ***A ಪಟ್ಟಿ*** | | ***B ಪಟ್ಟಿ*** | |
|---|---|---|---|
| (a) | ಅಜೀಂ ಪ್ರೇಮ್‌ಜಿ | (i) | ಬಯೋಕಾನ್ ನಿಗಮ |
| (b) | ಡಾ|| ಪ್ರತಾಪರೆಡ್ಡಿ | (ii) | ಜೆಟ್ ವಾಯುಮಾರ್ಗ |
| (c) | ಕಿರಣ್ ಮಜುಮ್‌ದಾರ್ ಷಾ | (iii) | ವಿಪ್ರೋ ತಂತ್ರಜ್ಞಾನ |
| (d) | ನರೇಶ್ ಗೋಯೆಲ್ | (iv) | ಅಪೋಲೋ ಆಸ್ಪತ್ರೆಗಳು |

| | ***a*** | ***b*** | ***c*** | ***d*** |
|---|---|---|---|---|
| (A) | iv | i | ii | iii |
| (B) | i | ii | iii | iv |
| (C) | iii | iv | i | ii |
| (D) | ii | iii | iv | i |



www.careerindia.com

5. ರಾಜಸ್ತಾನದಲ್ಲಿ ಅತಿ ಹೆಚ್ಚಾಗಿ ಕಂಡುಬರುವ ಮಣ್ಣಿನ ವಿಧ

(A) ಮೆಕ್ಕಲು ಮಣ್ಣು (B) ಮರುಭೂಮಿ ಮಣ್ಣು

(C) ಕೆಂಪು ಮಣ್ಣು (D) ಲ್ಯಾಟರೈಟ್ ಮಣ್ಣು

6. 1909 ರ ಮಿಂಟೋ–ಮಾರ್ಲೆ ಸುಧಾರಣೆಗಳು ಭಾರತದ ವಿಭಜನೆಗೆ ನಾಂದಿ ಹಾಡಿದವು. ಏಕೆಂದರೆ, ಅದು

(A) ದ್ವಿಮುಖ ಸರ್ಕಾರವನ್ನು ರದ್ದುಗೊಳಿಸಿತು

(B) ನಿಯಂತ್ರಣ ಮಂಡಳಿಯನ್ನು ಸ್ಥಾಪಿಸಿತು

(C) ಕಾರ್ಯಕಾರಿ ಸಮಿತಿಗೆ ಭಾರತೀಯರನ್ನು ನಾಮಕರಣ ಮಾಡಿತು

(D) ಮತೀಯ ಆದಾರದ ಮೇಲೆ ಪ್ರತ್ಯೇಕ ಚುನಾವಣಾ ಕ್ಷೇತ್ರವನ್ನು ಸ್ಥಾಪಿಸಿತು

7. ಈ ನಕ್ಷೆಯಲ್ಲಿ ಗುರುತಿಸಿರುವ ಸ್ಥಳಗಳಿಗೆ ಸರಿಯಾಗಿ ಹೋಲಿಕೆಯಾಗುವುದು :




(A) 1 — ಅಮೃತಸರ, 2 — ಗುವಾಹಟಿ, 3 — ಹೈದರಾಬಾದ್

(B) 1 — ಗುವಾಹಟಿ, 2 — ಹೈದರಾಬಾದ್, 3 — ಅಮೃತಸರ

(C) 1 — ಹೈದರಾಬಾದ್, 2 — ಅಮೃತಸರ, 3 — ಗುವಾಹಟಿ

(D) 1 — ಅಲಹಾಬಾದ್, 2 — ಹೈದರಾಬಾದ್, 3 — ಅಮೃತಸರ

8. ಭಾರತವು ನೆಲ್ಸನ್ ಮಂಡೇಲಾರವರನ್ನು ಬೆಂಬಲಿಸಿತು. ಏಕೆಂದರೆ,

(A) ಭಾರತವು ನೆಲ್ಸನ್ ಮಂಡೇಲಾರವರನ್ನು 'ಆಫ್ರಿಕಾದ ಗಾಂಧಿ' ಎಂದು ಕರೆಯಿತು

(B) ಭಾರತದ ವಿದೇಶಾಂಗದ ನೀತಿಯು ವರ್ಣಬೇಧ ನೀತಿಯನ್ನು ವಿರೋಧಿಸುತ್ತದೆ

(C) ಭಾರತವು ವಿಶ್ವಸಂಸ್ಥೆಯ ಪ್ರಮುಖ ಸದಸ್ಯ ರಾಷ್ಟ್ರವಾಗಿದೆ

(D) ಭಾರತವು ಅಲಿಪ್ತ ನೀತಿಯನ್ನು ಅನುಸರಿಸುತ್ತಿದೆ

CAREERINDIA



9. ನಾವು 10ನೇ ಡಿಸೆಂಬರನ್ನು 'ಮಾನವ ಹಕ್ಕುಗಳ ದಿನ'ವನ್ನಾಗಿ ಆಚರಿಸುತ್ತೇವೆ. ಏಕೆಂದರೆ,
   (A) ಅಬ್ರಹಾಂ ಲಿಂಕನ್ ಗುಲಾಮಗಿರಿಯನ್ನು ರದ್ದುಪಡಿಸಿದ್ದು 10ನೇ ಡಿಸೆಂಬರ್ 1865
   (B) ನೆಲ್ಸನ್ ಮಂಡೇಲಾ ಸೆರೆವಾಸದಿಂದ ಬಿಡುಗಡೆಗೊಂಡಿದ್ದು 10ನೇ ಡಿಸೆಂಬರ್ 1993
   (C) ವಿಶ್ವಸಂಸ್ಥೆ ಸಾರ್ವತ್ರಿಕ ಮಾನವ ಹಕ್ಕುಗಳನ್ನು ಘೋಷಿಸಿದ್ದು 10ನೇ ಡಿಸೆಂಬರ್ 1948
   (D) ಭಾರತವು ತನ್ನ ನಾಗರಿಕರಿಗೆ ಮೂಲಭೂತ ಹಕ್ಕುಗಳನ್ನು ಈ ದಿನ ಘೋಷಿಸಿದ್ದು

10. ದಯಾನಂದ ಸರಸ್ವತಿಯವರು ಸ್ವಾಭಿಮಾನ ಮತ್ತು ಸ್ವಾವಲಂಬನೆಯ ಬೋಧನೆಗಳ ಮೂಲಕ ಜನರನ್ನು ಪ್ರೇರೇಪಿಸಿದ್ದು
   (A) ವರ್ಗರಹಿತ ಸಮಾಜದ ಸ್ಥಾಪನೆ ಮಾಡಲು
   (B) ಸತಿ ಮತ್ತು ಬಾಲ್ಯವಿವಾಹದ ವಿರುದ್ಧ ಹೋರಾಡಲು
   (C) ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿಸಿಕೊಳ್ಳಲು
   (D) ಶೈಕ್ಷಣಿಕ ಸುಧಾರಣೆಗಳನ್ನು ತರಲು

II. **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** $14 \times 1 = 14$

11. ಜನಸಾಮಾನ್ಯರ ಇತಿಹಾಸವನ್ನು ರಚಿಸುವುದು ಇತಿಹಾಸಕಾರರಿಗೆ ಸವಾಲಾಗಿ ಪರಿಣಮಿಸಿದೆ. ಏಕೆ ?
12. ಸರ್ ಸಯ್ಯದ್ ಅಹಮದ್‌ಖಾನ್‌ರು ಮುಸ್ಲಿಂ ಸಮುದಾಯದಲ್ಲಿ ಹೇಗೆ ಶೈಕ್ಷಣಿಕ ಅರಿವನ್ನು ಮೂಡಿಸಿದರು ?
13. ಸಮಾಜವಾದಿ ವ್ಯವಸ್ಥೆಯು ರಷ್ಯಾದಲ್ಲಿ ಏಕೆ ಕುಸಿಯಿತು ?
14. ಭಾರತದಲ್ಲಿ ಕೋಮುವಾದದ ಬೀಜವನ್ನು ಬಿತ್ತಿದ ಬ್ರಿಟಿಷರ ನೀತಿ ಯಾವುದು ?
15. 'ವಸಾಹತುಶಾಹಿತ್ವ' ಎಂದರೇನು ?
16. ಚಿಪ್ಕೋ ಚಳುವಳಿಯ ನೇತಾರರು ಯಾರು ?
17. 'ಸರ್ವ ಶಿಕ್ಷಣ ಅಭಿಯಾನವು ಬಾಲಕಾರ್ಮಿಕತೆಯನ್ನು ನಿವಾರಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತಿದೆ.' ಹೇಗೆ ?
18. ಯಾವ ಮಣ್ಣನ್ನು 'ರೇಗೂರ್ ಮಣ್ಣು' ಎಂತಲೂ ಕರೆಯುತ್ತಾರೆ ?
19. ರಾಷ್ಟ್ರೀಯ ವಿದ್ಯುತ್ ಜಾಲವನ್ನು ಏಕೆ ನಿರ್ಮಿಸಲಾಗಿದೆ ?
20. ಕಡಲ ತೀರದುದ್ದಕ್ಕೂ ಮ್ಯಾಂಗ್ರೋವ್ ಅರಣ್ಯಗಳನ್ನು ಏಕೆ ಬೆಳೆಸಬೇಕು ?

www.careerindia.com

CAREERINDIA



21. ಚಂಡಮಾರುತಗಳಿಂದ ಹೆಚ್ಚು ಹಾನಿಗೊಳಗಾಗುವ ಭಾರತದ ರಾಜ್ಯಗಳು ಯಾವುವು ?

22. ಕೇಂದ್ರ ಆಯವ್ಯಯವನ್ನು ಲೋಕಸಭೆಯಲ್ಲಿ ಮಂಡಿಸುವವರು ಯಾರು ?

23. 'ಗ್ರಾಮಗಳ ಅಭಿವೃದ್ಧಿಯೇ ಭಾರತದ ನೈಜ ಅಭಿವೃದ್ಧಿ' ಎಂದು ಹೇಳಿದವರು ಯಾರು ?

24. ಭಾರತದ ರಿಸರ್ವ್ ಬ್ಯಾಂಕನ್ನು 'ಬ್ಯಾಂಕ್‌ಗಳ ತಾಯಿ' ಎಂದು ಏಕೆ ಕರೆಯುತ್ತಾರೆ ?

III. **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ *ಎರಡರಿಂದ ನಾಲ್ಕು* ವಾಕ್ಯಗಳಲ್ಲಿ ಉತ್ತರಿಸಿ :** 25 × 2 = 50

25. ಭಾರತಕ್ಕೆ ಹೊಸ ಜಲಮಾರ್ಗವನ್ನು ಕಂಡುಹಿಡಿಯಲು ಯುರೋಪಿಯನ್ನರಿಗೆ ಸಹಾಯಕವಾದ ಅಂಶಗಳಾವುವು ?

***ಅಥವಾ***

ಬಕ್ಸಾರ್ ಕದನದ ಫಲಿತಾಂಶಗಳೇನು ?

26. ನಾವು ಮೈಸೂರು ಒಡೆಯರನ್ನು ಏಕೆ ಸ್ಮರಿಸುತ್ತೇವೆ ?

27. 'ಭಾಷೆಯ ಆಧಾರದ ಮೇಲೆ ಆಂಧ್ರ ಪ್ರದೇಶದ ರಚನೆ ಭಾರತ ಸರ್ಕಾರಕ್ಕೆ ಅನಿವಾರ್ಯವಾಗಿತ್ತು.' ಏಕೆ ?

28. 'ಜೋಸೆಫ್ ಸ್ಟಾಲಿನ್ ರಷ್ಯಾವನ್ನು ಅಮೆರಿಕಾಕ್ಕೆ ಸವಾಲಾಗುವಂತೆ ನಿರ್ಮಾಣ ಮಾಡಿದರು' ಹೇಗೆ ?

29. ಅನಕ್ಷರತೆಯ ನಿರ್ಮೂಲನೆಗಾಗಿ ಭಾರತ ಸರ್ಕಾರ ಕೈಗೊಂಡಿರುವ ಕ್ರಮಗಳಾವುವು ?

30. ಜಾಗತಿಕ ಸಮಸ್ಯೆಗಳನ್ನು ಪರಿಹರಿಸಲು ಆಹಾರ ಮತ್ತು ಕೃಷಿ ಸಂಸ್ಥೆ ಹೇಗೆ ಕಾರ್ಯ ನಿರ್ವಹಿಸುತ್ತಿದೆ ?

31. 'ಭಾರತದಲ್ಲಿ ಅಸ್ಪೃಶ್ಯತೆಯ ಆಚರಣೆಯು ಇತ್ತೀಚಿನ ದಿನಗಳಲ್ಲಿ ಕಡಿಮೆಯಾಗುತ್ತಿದೆ.' ಕಾರಣಗಳನ್ನು ಕೊಡಿ.

32. ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು ಹಾಗೂ ಲಕ್ಷದ್ವೀಪಗಳ ನಡುವಿನ ವ್ಯತ್ಯಾಸಗಳನ್ನು ತಿಳಿಸಿ.

33. 'ಭಾರತದ ವಾಯುಗುಣವು ತನ್ನ ಆರ್ಥಿಕ ಬೆಳವಣಿಗೆಯ ಮೇಲೆ ಪ್ರಭಾವ ಬೀರುತ್ತದೆ.' ಸಮರ್ಥಿಸಿ.

34. ಈ ಕೆಳಗೆ ಕೊಟ್ಟಿರುವ ಮರಗಳನ್ನು ಉಷ್ಣವಲಯದ ಹುಲ್ಲುಗಾವಲು ಮತ್ತು ಹಿಮಾಲಯದ ಆಲ್ಪೈನ್ ಅರಣ್ಯಗಳ ಅಡಿಯಲ್ಲಿ ವರ್ಗೀಕರಿಸಿ ಬರೆಯಿರಿ :

ಸಿಲ್ವರ್, ಬಬೂಲ್, ಶಿಷಮ್, ಲಾರೆಲ್.

35. ಖರೀಫ್ ಮತ್ತು ರಬಿ ಋತುಗಳ ನಡುವಿನ ವ್ಯತ್ಯಾಸಗಳನ್ನು ತಿಳಿಸಿ.



www.careerindia.com

CAREERINDIA



36. ನೈಸರ್ಗಿಕ ವಿಕೋಪಗಳ ಸಮಯದಲ್ಲಿ ದೂರಸಂವೇದಿ ತಂತ್ರಜ್ಞಾನವು ಹೇಗೆ ಉಪಯುಕ್ತವಾಗಿದೆ ?

37. 'ಜನಸಂಖ್ಯಾ ಹೆಚ್ಚಳವು ಹಲವಾರು ಸಮಸ್ಯೆಗಳಿಗೆ ಕಾರಣವಾಗಿದೆ.' ಸಮರ್ಥಿಸಿ.

38. ಒಂದು ದೇಶದ 'ನೈಜ ಅಭಿವೃದ್ಧಿಯನ್ನು' ಹೇಗೆ ಸಾಧಿಸಬಹುದು ?

39. 'ಜಾಗತೀಕರಣವು ಪರಿಸರದ ಅವನತಿಗೆ ಕಾರಣವಾಗುತ್ತದೆ.' ಹೇಗೆ ?

40. ಹೈದರಾಬಾದ್–ಕರ್ನಾಟಕದ ಪ್ರದೇಶಗಳನ್ನು ಹೆಸರಿಸಿ.

41. ಭಾರತದ ಪ್ರಮುಖ ಸಮಾಜ ಸುಧಾರಕರನ್ನು ಹೆಸರಿಸಿ.

42. ಭಾರತದ ವಿದೇಶಾಂಗ ನೀತಿಯ ಉದ್ದೇಶಗಳಾವುವು ?

43. ಭಯೋತ್ಪಾದನೆಯಿಂದ ಉಂಟಾಗುವ ಪರಿಣಾಮಗಳೇನು ?

44. ಅಸ್ಪೃಶ್ಯತೆಯ ನಿವಾರಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳಾವುವು ?

45. ಭಾರತದ ನಾಲ್ಕು ಪ್ರಧಾನ ಭೂ–ಸ್ವರೂಪಗಳಾವುವು ?

46. ಮಣ್ಣಿನ ವಿಧಗಳನ್ನು ಹೆಸರಿಸಿ.

47. ಭಾರತದ ನಾಲ್ಕು ಋತುಮಾನಗಳನ್ನು ಹೆಸರಿಸಿ.

48. ಮಾನವ ಅಭಿವೃದ್ಧಿಯ ಸೂಚಕಗಳಾವುವು ?

49. ಬ್ಯಾಂಕುಗಳು ಸಲ್ಲಿಸುವ ಸೇವೆಗಳಾವುವು ?

IV. **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಉತ್ತರಿಸಿ :** $6 \times 3 = 18$

50. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಬ್ರಿಟಿಷರ ಆಡಳಿತ ಪದ್ಧತಿ ಮತ್ತು ಆರ್ಥಿಕ ನೀತಿ ಹೇಗೆ ಕಾರಣವಾದವು ? ವಿವರಿಸಿ.

***ಅಥವಾ***

ಬ್ರಿಟಿಷರ ಭೂ ಕಂದಾಯ ಪದ್ಧತಿಯು ಭಾರತೀಯ ರೈತರ ಮೇಲೆ ಹೇಗೆ ದುಷ್ಪರಿಣಾಮ ಬೀರಿತು ? ವಿವರಿಸಿ.

51. 'ಇತ್ತೀಚಿನ ದಿನಗಳಲ್ಲಿ ಭಾರತ ಮತ್ತು ಚೀನಾಗಳ ನಡುವಣ ಸಂಬಂಧ ಹದಗೆಟ್ಟಿದೆ' ಸ್ಪಷ್ಟೀಕರಿಸಿ.

***ಅಥವಾ***

'ಮಾನವ ಹಕ್ಕುಗಳ ಪ್ರತಿಪಾದನೆಯಲ್ಲಿ ಭಾರತ ಪ್ರಮುಖ ಪಾತ್ರವಹಿಸುತ್ತಿದೆ.' ಸ್ಪಷ್ಟೀಕರಿಸಿ.



www.careerindia.com

CAREERINDIA



52. ನಿರುದ್ಯೋಗ ಸಮಸ್ಯೆಗೆ ಪರಿಹಾರೋಪಾಯಗಳನ್ನು ವಿವರಿಸಿ.

***ಅಥವಾ***

ಮಹಿಳಾ ಸ್ವ–ಸಹಾಯ ಸಮೂಹಗಳ ಪ್ರಾಮುಖ್ಯತೆಯನ್ನು ವಿವರಿಸಿ.

53. ಶಕ್ತಿ ಸಂಪನ್ಮೂಲಗಳ ಕೊರತೆಯನ್ನು ನಿವಾರಿಸುವ ಪರಿಹಾರ ಕ್ರಮಗಳಾವುವು ?

***ಅಥವಾ***

ಭಾರತದ ರಸ್ತೆ ಸಾರಿಗೆಯ ತೊಡಕುಗಳಾವುವು ?

54. ಸ್ವಾತಂತ್ರ್ಯಾನಂತರ ಭಾರತ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಲು ಹೇಗೆ ಶ್ರಮಿಸಿತು ?

***ಅಥವಾ***

ಗ್ರಾಮೀಣಾಭಿವೃದ್ಧಿಯು ದೇಶದ ಆರ್ಥಿಕ ಅಭಿವೃದ್ಧಿಗೆ ಹೇಗೆ ಸಹಾಯಕವಾಗಿದೆ ?

55. ವಿಮೆಯ ಪ್ರಯೋಜನಗಳಾವುವು ?

***ಅಥವಾ***

ಉದ್ಯಮಿ / ಉದ್ಯಮಗಾರಿಕೆಯ ಗುಣಲಕ್ಷಣಗಳಾವುವು ?

V. **ಈ ಕೆಳಗಿನ ಪ್ರಶ್ನೆಗೆ *ಎಂಟರಿಂದ ಹತ್ತು* ವಾಕ್ಯಗಳಲ್ಲಿ ಉತ್ತರಿಸಿ :** 4

56. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಷ್ ಚಂದ್ರ ಬೋಸ್‌ರವರ ಪಾತ್ರವನ್ನು ವಿವರಿಸಿ.

VI. 57. **ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ :** 1 + 3 = 4

a) $23\frac{1}{2}^{\circ}$ ಉತ್ತರ ಅಕ್ಷಾಂಶ

b) ನಾಗಾರ್ಜುನ ಸಾಗರ ಯೋಜನೆ

c) ಭದ್ರಾವತಿ

***ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ : (ಪ್ರಶ್ನೆ ಸಂಖ್ಯೆ 57 ರ ಬದಲಿಗೆ)***

ಭಾರತೀಯರ ಜನಜೀವನಕ್ಕೆ ಹಿಮಾಲಯ ಪರ್ವತದಿಂದಾಗುವ ಅನುಕೂಲಗಳೇನು ? 4

www.careerindia.com

www.careerindia.com